ಕೆಲಸಕ್ಕೆ ಸಂಬಂಧಿಸಿದಂತೆ ಇತರೆ ಕೆಲಸಗಳಿಗಾಗಿ ವಿನಿಯೋಗಿಸಲಾಗಿದೆ. ಈ ಹಣ ಕಳುವಾಗಿರುವುದಿಲ್ಲ ಮತ್ತು ನಾಪತ್ತೆಯಾಗಿರುವುದಿಲ್ಲ. ಈ ವೆಚ್ಚಕ್ಕೆ ಸಂಬಂಧಿಸಿದ ರಶೀದಿಗಳನ್ನು ಪದ್ಧತಿಯಂತೆ ಇಡಲಾಗಿದೆ. ಸದರಿ ಅಂಶದ ಬಗ್ಗೆ ಲೆಕ್ಕ ಪರಿಶೋಧನೆ ಮಾಡಲಾಗಿದೆ ಹಾಗೂ ವೆಚ್ಚದ ಲೆಕ್ಕ ಸಮರ್ಪಕ ರೀತಿಯಲ್ಲಿ ಇವೆ ಎಂದು ಪ್ರಮಾಣೀಕರಿಸಲಾಗಿದೆ.

English version

It is true that a sum of Rs.50.00 lakhs was received in DG & IGP's office from Intelligence Bureau during 2004. As per the records maintained in the DG & IGP's office during the term of previous two DG & IGP's from 2006 to 2008 this amount was utilized to purchase some articles and expenses relating to police requirement. This amount is not stolen or missing. Vouchers relating to this expenditure is maintained. This expenditure is also audited and the auditing party have certified that the expenditure is in order.

92 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಭಾಗ್ಯನಗರದ–62 ಮತ್ತು ಕುಷ್ಟಗಿ ರಸ್ತೆಯ–66 ರೈಲ್ವೆ ಗೇಟಿನ ಮೇಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಈ ಕಾಮಗಾರಿಗೆ ಸರ್ಕಾರವು ನಿಗಧಿ ಪಡಿಸುವ ಅನುದಾನದ ಮೊತ್ತವೆಷ್ಟು;

ಈ) ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಉ) ಕೊಪ್ಪಳ ಜಿಲ್ಲಾ ಕೇಂದ್ರ ಸ್ಥಾನಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು?

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಎಲ್.ಸಿ.ನಂ–62, 64 ಮತ್ತು 66 ಈ ಮೂರು ಲೆವೆಲ್ ಕ್ರಾಸಿಂಗ್‌ಗಳ ಬದಲಾಗಿ ಒಂದು ರಸ್ತೆ ಮೇಲು ಸೇತುವೆಯನ್ನು ವೆಚ್ಚ ಹಂಚಿಕೆ

9-11-5

ಆಧಾರದ ಮೇಲೆ ಲೆವೆಲ್ ಕ್ರಾಸಿಂಗ್ 62ರ ಬಳಿ ನಿರ್ಮಾಣ ಮಾಡಲು ರೈಲ್ವೆ ಆಯವ್ಯಯ 2009–10ರಲ್ಲಿ ಮಂಜೂರಾಗಿದೆ.

ಆ) ರಾಜ್ಯ ಹಾಗೂ ಕೇಂದ್ರ ಸರ್ಕಾರ ವೆಚ್ಚ ಹಂಚಿಕೆ ಅಧಾರದ ಮೇಲೆ ನಿರ್ಮಾಣ ಮಾಡಲು ಮಂಜೂರಾತಿಯನ್ನು ನೀಡಿರುವುದರಿಂದ ಕಾಮಗಾರಿಯ GAD ಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಒಟ್ಟು ಮೊತ್ತ ರೂ.4.30 ಕೋಟಿ (ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೆಚ್ಚ ಪಾಲು ಆಧಾರದಲ್ಲಿ)

ಈ) ಸಾಮಾನ್ಯ ಒಪ್ಪಂದ ನಕ್ಷೆ (GAD) ಅನುಮೋದನೆಯಾದ ನಂತರ ರೈಲ್ವೆ, ಲೋಕೋಪಯೋಗಿ ಇಲಾಖೆ ಹಾಗೂ ಸ್ಥಳೀಯ ಪ್ರಾಧಿಕಾರಗಳು ಸೇತುವೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಉ) ಇದೆ.

ಊ) 2009–10ನೇ ಸಾಲಿನ ಆಯವ್ಯಯದಲ್ಲಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊಪ್ಪಳ ನಗರಕ್ಕೆ ಮುಂದಿನ ಎರಡು ವರ್ಷಗಳಲ್ಲಿ ತಲಾ 15 ಕೋಟಿಯಂತೆ ಒಟ್ಟು ರೂ. 30 ಕೋಟಿಗಳನ್ನು ಅನುದಾನ ಪಡೆಯಬಹುದಾಗಿದೆ. ಈ ಯೋಜನೆ ಜಾರಿಗೆ ಸಂಬಂಧಿಸಿದಂತೆ ಅನುಮತಿಯನ್ನು ಸಹ ನೀಡಲಾಗಿದೆ. ಕೊಪ್ಪಳ ನಗರಕ್ಕೆ ಪ್ರಸಕ್ತ ವರ್ಷದಲ್ಲಿ ರೂ. 4.55 ಕೋಟಿಗಳ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನವನ್ನು ಮೂಲಸೌಕರ್ಯಗಳಿಗಾಗಿ ಬಿಡುಗಡೆ ಮಾಡಲಾಗಿದೆ ಮತ್ತು ಉತ್ತರ ಕರ್ನಾಟಕ ನಗರ ವಲಯ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.22.48 ಕೋಟಿ ಯೋಜನಾ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.

776 ಶ್ರೀ ಬಂಡೆಪ್ಪ ಕಾಶ್ಯಂಪೂರ್ : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ವಿಮಾನ ನಿಲ್ದಾಣವನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ಕಾರ್ಯಾರಂಭ ಮಾಡದಿರಲು ಕಾರಣಗಳೇನು;

ಇ) ಈ ವಿಮಾನ ನಿಲ್ದಾಣವನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಈ) ಈ ನಿಲ್ದಾಣವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?